ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ನೂರ ನಲವತ್ತಮೂರನೆಯ ಅಧಿವೇಶನ

ಮಂಗಳವಾರ, ದಿನಾಂಕ: 2ನೇ ಫೆಬ್ರುವರಿ, 2021

ಸಾರ್ವಜನಿಕ ಉದ್ದಿಮೆಗಳಲ್ಲಿ ಅನುಕಂಪದ ಆಧಾರಿತ ಹುದ್ದೆಗಳ ಬಾಕಿ ಅರ್ಜಿಗಳ ಬಗ್ಗೆ

ಶ್ರೀ ಕಾಂತರಾಜ್ (ಬಿ.ಎಂ.ಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-

177(217) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿರುವ ಸಾರ್ವಜನಿಕ ಉದ್ದಿಮೆಗಳು ಎಷ್ಟು, ಅವು ಯಾವುವು; ಅವುಗಳನ್ನು ಯಾವ ರೀತಿ ವರ್ಗೀಕರಿಸಲಾಗಿದೆ ; (ಆಡಳಿತ ಇಲಾಖಾವಾರು ವಿವರವಾಗಿ ಮಾಹಿತಿ ನೀಡುವುದು)

(ಆ) ಸದರಿ ಸಾರ್ವಜನಿಕ ಉದ್ದಿಮೆಗಳು ದಿನಾಂಕ:01.04.2001 ರಿಂದ ಇಲ್ಲಿಯವರೆಗೂ ಅಂದರೆ 20 ವರ್ಷಗಳ ಕಾಲ ಅನುಕಂಪ ಆಧಾರಿತ ಹುದ್ದೆಗಳನ್ನು ನೇಮಕ ಮಾಡುವ ಸಂಬಂಧ ನಿರ್ಭಂದ ವಿಧಿಸಿರುವುದು ಸರಿಯೇ ; ಈ ರೀತಿ ನಿರ್ಬಂಧಗಳನ್ನು ವಿಧಿಸಲು ಕಾರಣಗಳೇನು; (ವಿವರವಾದ ಮಾಹಿತಿ ನೀಡುವುದು)

(ಇ) ಈ ದಿನಾಂಕದವರೆಗೆ ಅನುಕಂಪ ಆಧಾರದ ಮೇಲೆ ಕೆಲಸ ಕೋರಿ ಬಂದ ಅರ್ಜಿಗಳು ಎಷ್ಟು; ಬಾಕಿ ಇರುವ ಅರ್ಜಿಗಳು ಎಷ್ಟು ; (ವಿವರವಾಗಿ ಮೃತ ನೌಕರನ ಹೆಸರು, ಅರ್ಜಿದಾರರ ಹೆಸರು, ವಿಳಾಸ, ದೂರವಾಣಿ ಸಂಖ್ಯೆ ಹಾಗೂ ಅರ್ಜಿ ಸಲ್ಲಿಸಿದ ದಿನಾಂಕದೊಂದಿಗೆ ನಿಗಮವಾರು ವಿವರವಾದ ಮಾಹಿತಿ ನೀಡುವುದು)

(ಈ) ಯಾವ ಕಾಲಮಿತಿಯೊಳಗೆ ಈ ನಿರ್ಬಂಧವನ್ನು ಸರ್ಕಾರ ರದ್ದುಗೊಳಿಸಿ ನೊಂದ ಕುಟುಂಬಗಳಿಗೆ ನ್ಯಾಯ ದೊರಕಿಸುವುದು?